ನಡೆಯುತ್ತಿದೆ. ಅದಕ್ಕೂ ನಾನು ಜವಾಬು ನೀಡಬೇಕು. ಹೋಗುವ ಮೊದಲು ನನಗೆ ತಿಳಿಯದಂತೆ ನಮ್ಮ ವ್ಯಾಪಾರದಲ್ಲಿ ಕೆಲವು ಮೂಲಭೂತ ವ್ಯವಹಾರಗಳನ್ನು ಮುಕುಂದ ಮಾಡಿದ್ದ... ಅದನ್ನು ನಿಭಾಯಿಸಬೇಕು... ಮತ್ತು ನಮ್ಮ ವ್ಯಾಪಾರವನ್ನು ಯುವಪೀಳಿಗೆಯವರು ಆಕ್ರಮಿಸಿಕೊಂಡಿದ್ದಾರೆ. ಇಟ್ಸ್ ಜಸ್ಟ್ ಎನ್ಕ್ರೋಚ್ಮೆಂಟ್... ಜಿಸ್ ಕೀ ಲಾಠಿ ಉಸ್ಕಿ ಭೈಂಸ್ ಅನ್ನುವ ಹಾಗೆ... ಐ ಯಾಮ್ ಡೀಲಿಂಗ್ ವಿಥ್ ದ ಷಿಯರ್ ಅಡಾಸಿಟಿ ಆನ್ ದೆಯರ್ ಪಾರ್ಟ್ ಆಂಡ್ ಹೆಲ್ಪ್ ಲೆಸ್ ನೆಸ್ ಆನ್ ಮೈನ್. ನಾನು ಇಷ್ಟು ಅಸಹಾಯಕ ಪರಿಸ್ಥಿತಿಯಲ್ಲಿ ಎಂದೂ ಇರಲಿಲ್ಲ. ಹೀಗಾಗಿಯೇ ನಾನು ಹೋರಾಡುವ ಮನಃಸ್ಥಿತಿಯನ್ನು ಹೊಂದಿಲ್ಲ. ಬಿಟ್ಟುಕೊಡೋಣ ಅನ್ನಿಸಿದಾಗಲೆಲ್ಲಾ – ಅನ್ಯಾಯಕ್ಕೆ ಮಣಿಯುವುದರಲ್ಲಿ ಮತ್ತು ಹೋರಾಡದೇ ಸೋಲುವುದರಲ್ಲಿ ಯಾವ ವೈರಾಗ್ಯವಿದೆ ಅನ್ನೋ ಪ್ರಶ್ನೆನೂ ನನ್ನ ಮುಂದಿದೆ. ನಾನು ಅನಿರುದ್ಧನ ಜೊತೆ ಈ ಮಾತುಗಳನ್ನು ಚರ್ಚಿಸಲು ಪ್ರಯತ್ನಿಸುತ್ತಿದ್ದೇನೆ... ಬಟ್ ಹೀ ಇಸ್ ವೆರಿ ಟ್ರಾನ್ಸಾಕ್ಷನಲ್... ನೀನು ಹೇಳು ನಾನು ಏನು ಮಾಡಬೇಕು..."

"ಖಂಡಿತವಾಗಿಯೂ ಈ ವಿಷಯದಲ್ಲಿ ಏನು ಮಾಡುವುದೂ ಅನ್ನೋ ಕಾಲ್ ನೀನೇ ತೆಗೆದುಕೊಳ್ಳಬೇಕು. ಇಷ್ಟು ದೂರ ಕೂತು ನಾನು ತಾನೇ ಏನು ಹೇಳಲಿಕ್ಕೆ ಸಾಧ್ಯ? ನನಗೆ ಅಲ್ಲಿನ ಯಾವುದೇ ವಿವರಗಳು ಗೊತ್ತಿಲ್ಲ. ಮೇಲಾಗಿ ನಾನು ಕಂಡಿರೋದೆಲ್ಲಾ ಇಂಟರ್ನೆಟ್ಟಿನಲ್ಲಿರೋದು ಮತ್ತು ಅನಿರುದ್ಧ ಫಾರ್ವರ್ಡ್ ಮಾಡಿರೋ ಕೆಲವು ಲಿಂಕುಗಳು... ಇದನ್ನ ನೀನೇ ಡೀಲ್ ಮಾಡಬೇಕಲ್ಲವಾ."

"ನಿಜ. ಆದರೆ ನನಗೆ ಈಗ ಅನ್ನಿಸ್ತಾ ಇದೆ. ಗೆಳೆಯ ಅಂತ ಇದ್ದವನು ಮುಕುಂದಸಾಗರ ಒಬ್ಬನೇ. ಈಗ ಯಾರ ಜೊತೆ ಮಾತಾಡೋದು, ಯಾರ ಸಲಹೆ ಕೇಳೋದು... ಹೀಗಾಗಿಯೇ ಈ ವಿಷಯದಲ್ಲಿ ನೀನೇ ಸರಿಯಾದವನು. ನೀನು ಭೌತಿಕವಾಗಿಯೂ ದೂರದಲ್ಲಿ ಇದ್ದೀಯ, ಇದರ ರಾಜಕೀಯದಿಂದಲೂ ಒಂದು ಅಂತರವಿದೆ. ನೀನ್ಯಾಕೆ ಒಂದು ವಾರಕ್ಕಾಗಿ ಮುಂಬೈಗೆ ಬರಬಾರದು... ಐ ವಿಲ್ ಸೆಂಡ್ ಯೂ ದ ಟಿಕೆಟ್... ನಾವು ಈ ಗೋಜಲನ್ನು ಬಿಡಿಸೋಣ. ಐ ವಿಲ್ ಕಾಲ್ ಅನಿರುದ್ಧ್ ಆಲ್ಸೋ..."

"ಯು ಥಿಂಕ್ ಇಟ್ ಇಸ್ ಸೇಫ್? ಸ್ಕೈಪಿನ ಮೇಲೆ ಅಥವಾ ವಾಟ್ಸ್ಆ್ಯಪ್ ವಿಡಿಯೊ ಮೇಲೆ ಮಾತಾಡೋಕ್ಕೆ ಸಾಧ್ಯವಿಲ್ಲವಾ... ಕಳೆದ ಬಾರಿಯ ನಂತರ ನನಗೆ ನಿಜಕ್ಕೂ ಬರಬೇಕೂಂತ ಅನ್ನಿಸ್ತಾ ಇಲ್ಲ..."

"ಡೋಂಟ್ ಬಿ ಸಿಲ್ಲಿ. ಬಂದು ನನ್ನ ಜೊತೇನೇ ಇರು. ಒಂದು ವಾರದಲ್ಲಿ ಎಲ್ಲವನ್ನೂ ನಿಪಟಾಯಿಸೋಣ."

ಸುಜಾತಾ ಹಾಗೆ ಹೇಳಿದಳಾದರೂ ಅವಳ ಜೊತೆ ಇರೋ ಪ್ರಶ್ನೆಯೇ ಇಲ್ಲವೆಂದು ಅಖ್ತರನಿಗೆ ಗೊತ್ತಿತ್ತು. ಈ ಸಂದರ್ಭದಲ್ಲಿ ಅವಳ ಸುತ್ತಲೂ ಅನುಮಾನಗಳಿರುವಾಗ – ವಿದೇಶದಿಂದ ತನ್ನಂತಹ ಪ್ರೊಫೈಲಿರುವವನು ಅಲ್ಲಿಗೆ ಹೋಗಬೇಕೇ, ಅದರಿಂದ ಅವಳಿಗೆ ಉಪಯೋಗವಾಗುತ್ತದೆಯೇ ಎನ್ನುವ ಪ್ರಶ್ನೆ ಅವನಲ್ಲಿ ಉದ್ಭವವಾಯಿತು. ಆದರೆ ಯಾರೋ ಒಬ್ಬರು ಸಹಾಯ ಬೇಕು ಎಂದು ಸ್ಪಷ್ಟವಾಗಿ ಕೇಳುತ್ತಿರುವಾಗ ಹೋಗದಿರುವುದು ತನ್ನ ಸುಖವನ್ನು ಕಾಪಾಡಿ, ಬೇರೊಬ್ಬರಿಗೆ ಸಮಾಧಾನ ಕೊಡದಿರುವಂತಹ ಸ್ವಾರ್ಥ ಎಂದು ಅವನಿಗನ್ನಿಸಿತು. ಆದರೆ ತನ್ನಿಂದ ಏನು ಪ್ರಯೋಜನವಾಗುತ್ತದೆ ಎನ್ನುವುದು ಮಾತ್ರ ಅಖ್ತರನಿಗೆ ಗೊತ್ತಿರಲಿಲ್ಲ.

ಹೇಗೂ ಅನಿರುದ್ಧನನ್ನೂ ಕರೆಯುತ್ತೇನೆ ಎಂದು ಸುಜಾತಾ ಹೇಳಿದ ನಂತರ ಮೂರೂ ಜನ ಸೇರಿ ಸುಜಾತಾಳ ಪರಿಸ್ಥಿತಿಯನ್ನು ಗಮನಿಸಿ ಒಂದು ಇತ್ಯರ್ಥಕ್ಕೆ ಬರಬಹುದು ಎಂದು ಅಖ್ತರನಿಗೆ ಅನ್ನಿಸಿತ್ತು.